QUESTION FOR ANSWER ON THE DAY

(but not taken up).

Amount spent for maintaining law and order during the recent Students' Strike in old Mysore area.

* *Q.*—118. Sri S. M. KRISHNA (Maddur).—

Will the Government be pleased to state :—

(*a*) the amount spent for maintaining law and order during the recent students' strike in old Mysore area ;

(*b*) the number of policemen that were deployed on special duty to various Districts in this connection ?

A.—Sri R. M. PATIL (Minister for Home).—

(*a*) Rs. 480-79 nP.

(*b*) 254.

Mr. SPEAKER.—Before I call upon the Hon'ble Minister to start the reply, I want to say that an Hon'ble Member namely Sri B. L. Gowda has made a request that he may be given a chance to speak. That is a solitary request. I have proposed to give him 10 minutes.

MOTION OF THANKS TO THE GOVERNOR FOR HIS ADDRESS.

(*Debate continued*)

ಶ್ರೀ ಬಿ. ಎಲ್. ಗೌಡ.—ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದ ಮೇಲೆ ಶ್ರೀಮಾನ್ ಸಿದ್ದಯ್ಯನವರು ತಂದಿರತಕ್ಕಂಥ ವಂದನಾ ನಿರ್ಣಯದ ಮೇಲೆ ಮಾತನಾಡುತ್ತಾ, ನರ ಕಾರದವರು ಯಾವ ರೀತಿಯಲ್ಲಿ ತಾವು ರೂಪಿಸಿದಂಥ ನೀತಿಗಳನ್ನು ಅನುಸರಿಸದೆ ಗಾಳಿಗೆ ಬಿಟ್ಟಿದ್ದಾರೆ, ತಾವು ಹಾಕಿದಂಥ ಕೆಲವು ನೀತಿಗಳಿಗೆ ವಿರೋಧವಾಗಿ ಹೇಗೆ ನಡೆದುಕೊಂಡಿದ್ದಾರೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

1-30 P.M.

ನಾನು ಕೇವಲ ಸಹಕಾರ ಮತ್ತು ವ್ಯವಸಾಯ ಇಲಾಖೆಗಳ ಬಗ್ಗೆ ಮಾತ್ರ ನನ್ನ ಭಾಷಣವನ್ನು ಮಿತಿಗೊಳಿಸುತ್ತೇನೆ. ಸಹಕಾರ ಇಲಾಖೆ ಬಹಳ ಮಹತ್ವದ ಇಲಾಖೆ. ಅಂತಹ ಒಂದು ಇಲಾಖೆಯಲ್ಲಿ ಅಲ್ಲಿನ ನಿಯಮಗಳ ಉಲ್ಲಂಘನೆಯಿಂದ ಎಷ್ಟೋ ಜನರಿಗೆ ತೊಂದರೆಯಾಗುತ್ತದೆ. ಅದನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಹೋದ ಸಾರಿ ಈ ಶಾಸನ ಸಭೆಯಲ್ಲಿ ಮಾನ್ಯ ಮಂತ್ರಿಗಳು ಈ ಸಹಕಾರ ತತ್ವದಲ್ಲಿ ಆಂಧೋಳನ ಮಾಡುತ್ತೇನೆ, ಸಹಕಾರಿ ತತ್ವವನ್ನು ಡೀಅಫೀಲಯಲೈಪೇಷನ್ ಅಥವಾ ಸರಕಾರಿ ಕೈವಾಡ ಕಡಮೆ ಮಾಡುತ್ತೇವೆ ಎಲ್ಲಾ ಸಹಕಾರಿ ಸಂಘಗಳಲ್ಲೂ ಜಿಲ್ಲಾ ಮಟ್ಟದ ಕೆಳಗೆ ಇರತಕ್ಕ ಸಂಘಗಳಿಗೆ ಖಾನಗಿಯವರನ್ನು ನಾಮಕರಣ ಮಾಡುವುದನ್ನು ಕೈಬಿಡುತ್ತೇವೆ ಎಂದು ಹೇಳಿದರು. ಆದರೆ ಕಾರ್ಯಾಚರಣೆಯಲ್ಲಿ ಅದಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ತಮ್ಮ ಗಮನಕ್ಕೆ ಒಂದು ಉದಾಹರಣೆಯನ್ನು ತರುವುದಾದರೆ ತಾಲ್ಲೂಕು ಮಟ್ಟದ ವ್ಯವಸಾಯ ಉತ್ಪನ್ನದ ಮಾರಾಟ ಸಂಘಗಳಿಗೆ ಜಿಲ್ಲಾ ಕೇಂದ್ರ ಬ್ಯಾಂಕುಗಳಿಗೆ – ಅವರ ತತ್ವಕ್ಕೆ ವಿರುದ್ಧವಾಗಿ ಇನ್ನೂ ಖಾನಗಿಯವರನ್ನೇ ನಾಮಕರಣ ಮಾಡಿ ಮುಂದುವರಿಸಿಕೊಂಡು ಬರುತ್ತಾ ಇದ್ದಾರೆ. ಇದನ್ನು